ಆ. ಹಾಗಿದ್ದಲ್ಲಿ, ಸದರಿ ಸ್ಥಳದಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಗೆ ಸೇರಿದ ಸುಮಾರು 3000 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾಗ್ಯೂ ಅಲ್ಲಿ ಒಂದು ಸರ್ಕಾರದ ಹಾಸ್ಟೆಲ್ ಕಟ್ಟಡವಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ಇಲ್ಲಿ ಒಂದು ಹಾಸ್ಟೆಲ್ ಕಟ್ಟಡವನ್ನು ನಿರ್ಮಿಸಲು ಸರ್ಕಾರದವರಿಗೆ ಅಡ್ಡಿ ಆತಂಕಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ. ಹೌದು.

ಆ. ಹೌದು.

ಇ. ಮೇಲೆ ಹೇಳಿದ ಸ್ಥಳದಲ್ಲಿ ವಿದ್ಯಾರ್ಥಿನಿಲಯದ ಕಟ್ಟಡ ಕಟ್ಟಲು ಯಾವುದೇ ತೊಂದರೆ ಇಲ್ಲ. ಈಗಾಗಲೇ ಈ ವಿದ್ಯಾರ್ಥಿನಿಲಯ ಕಟ್ಟಲು ಬೇಕಾಗುವ ನಿವೇಶನವನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಮತ್ತು ಈಗಾಗಲೇ 49.64 ಲಕ್ಷ ರೂ.ಗಳ ಅಂದಾಜು ವೆಚ್ಚ ಮತ್ತು ನಕ್ಷೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ವಿಷಯ ಸರ್ಕಾರ ಪರಿಶೀಲಿಸುತ್ತಿದೆ.

ಹಾಸನ ಜಿಲ್ಲೆಯಲ್ಲಿ ಮಂಜೂರಾತಿಯಾಗಿರುವ ಕೈಗಾರಿಕಾ ಅಭಿವೃದ್ಧಿ ಕೇಂದ್ರದ ಬಗ್ಗೆ

1522: ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೇನರಸೀಪುರ):– ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಹಾಸನ ಜಿಲ್ಲೆಗೆ ಮಂಜೂರಾಗಿರುವ "ಕೈಗಾರಿಕಾ ಅಭಿವೃದ್ಧಿ ಕೇಂದ್ರ" ಯೋಜನೆಯ ಪ್ರಗತಿಯು ಯಾವ ಹಂತದಲ್ಲಿದೆ;

ಆ. ಈ ಯೋಜನೆಯಲ್ಲಿ ಭೂಮಿ ಕಳೆದುಕೊಳ್ಳುವ ನಿರಾಶ್ರಿತರ ಪುನರ್ವಸತಿಗೆ ಸರ್ಕಾರ ರೂಪಿಸುವ ವಿಶೇಷ ಯೋಜನೆಗಳಾವುವು ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.(ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):–

ಅ. ಹಾಸನ ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿ ಕೇಂದ್ರಕ್ಕಾಗಿ 2000 ಎಕರೆ ಜಮೀನುಗಳಿಗೆ ಭೂಸ್ವಾಧೀನ ನಡವಳಿಕೆಯನ್ನು ಕೈಗೊಂಡಿದ್ದು ಅಂತಿಮ ಅಧಿಸೂಚನೆಯನ್ನು ಪ್ರಕಟಿಸುವ ಹಂತದಲ್ಲಿರುತ್ತದೆ.

ಆ. ಈ ಯೋಜನೆಯಡಿಯಲ್ಲಿ ಜನವಸತಿ ಇರುವ ಯಾವ ಗ್ರಾಮವನ್ನೂ ಸ್ಥಳಾಂತರಿಸುವ ಅವಶ್ಯಕತೆ ಇರುವುದಿಲ್ಲ. ಭೂಸ್ವಾಧೀನಗೊಳ್ಳಲಿರುವ ಜಮೀನಿಗೆ ಸೂಕ್ತ ಪರಿಹಾರ ಧನವನ್ನು ನೀಡುವುದೇ ಅಲ್ಲದೇ ಗುತ್ತಿಗೆ ಕರಾರು ಪತ್ರದಲ್ಲಿ ಭೂಮಿ ಕಳೆದುಕೊಂಡ ರೈತರ ಕುಟುಂಬದ ಒಬ್ಬ ಸದಸ್ಯರಿಗೆ ಉದ್ಯೋಗ ನೀಡುವಂತೆ ನಿಬಂಧನೆಯನ್ನು ವಿಧಿಸಿ ಉದ್ಯೋಗಕ್ಕಾಗಿ ಭೂಮಿ ಕಳೆದುಕೊಂಡ ರೈತರಿಂದ ಹಾಗೂ ಅವರ ಕುಟುಂಬದವರಿಂದ ಬಂದ ಮನವಿಗಳನ್ನು ಶಿಫಾರಸ್ಸು ಮಾಡಿ ಸಂಬಂಧಿಸಿದ ಕಾರ್ಖಾನೆಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗುವುದು.

ರಾಜ್ಯದಲ್ಲಿನ ಬೀದಿಭಾಗ್ಯ ಯೋಜನೆ ಕುರಿತು

2153: ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೇನರಸೀಪುರ):– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?